**ದಿನಾಂಕಃ 12-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

***ಪಾಟೀ ಸವಾಲುಃ ಶ್ರೀ ವಿ.ಎಸ್.ಕೆ. ವಕೀಲರಿಂದ 9(e) ಮತ್ತು 10 ಪ್ರತಿವಾದಿ ಪರವಾಗಿಃ-***

ನನ್ನ ತಾಯಿಯ ಹೆಸರು ಮಾರೆಮ್ಮ. ನನ್ನ ತಾಯಿಯ ತಂದೆ ತಾಯಿಯ ಹೆಸರು ಗೊತ್ತಿಲ್ಲ. ನನ್ನ ತಂದೆಯ ಹೆಸರು ಈರಣ್ಣ. ನನ್ನ ತಂದೆಯ ತಂದೆ ಹೆಸರು ಹನುಮಯ್ಯ. ನನ್ನ ತಂದೆಯ ತಾಯಿಯ ಹೆಸರು ಗೊತ್ತಿಲ್ಲ, ಅವರು ನನ್ನ ತಂದೆ ಸಣ್ಣವರಿದ್ದಾಗಲೇ ತೀರಿಕೊಂಡಿದ್ದರು. ನನ್ನ ತಂದೆ ಯಾವಾಗ ತೀರಿಕೊಂಡರು ಎಂದು ನೆನಪಿಲ್ಲ. ನನ್ನ ತಾಯಿ ತೀರಿಕೊಂಡು ಸುಮಾರು 13 ವರ್ಷವಾಯಿತು. ನನ್ನ ತಾಯಿಕಡೆಯಿಂದ ನನಗೆ ಆಸ್ತಿ ಬಂದಿಲ್ಲ. ನನ್ನ ತಾಯಿ ಇದೇ ಊರಿನವರು. ನನ್ನ ಅಣ್ಣ ತಮ್ಮಂದಿರು ಬದುಕಿಲ್ಲ. ನನ್ನ ತಾಯಿಯ ಕಡೆ ಯಾವುದೇ ಆಸ್ತಿ ಇಲ್ಲ. ನನ್ನ ತಂದೆಯ ಕಡೆಯಿಂದ ಯಾವುದೇ ಆಸ್ತಿ ಬಂದಿಲ್ಲ. ನನ್ನ ತಂದೆಗೆ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಚೆಂದ್ರಬಂಡ ಕಡೆ 7 ಎಕರೆ ಚಿಲ್ಲರೆ, ಸಾಲವೆಂಟ್ ಕಡೆ 9 ಎಕರೆ ಚಿಲ್ಲರೆ ಜಮೀನು ಇದೆ. ನಾನು ಸೇರಿ ನನ್ನ ತಂದೆ ತಾಯಿಗೆ ಆರು ಮಕ್ಕಳು ಅದರಲ್ಲಿ ಮೂವರು ಹೆಣ್ಣು ಮಕ್ಕಳು ಮೂವರು ಗಂಡು ಮಕ್ಕಳು, ಮೂವರೂ ಗಂಡು ಮಕ್ಕಳು ತೀರಿಕೊಂಡಿರುತ್ತಾರೆ. ನನ್ನ ಸಹೋದರ ಸಹೋದರಿಯರು

ಶ್ರೀನಿವಾಸ್, ಗೋಪಾಲ್, ನರಸಿಂಹಲು, ಈರಮ್ಮ, ಉರ್ಕುಂದಮ್ಮ. ನಾವು ಮೂವರು ಹೆಣ್ಣು ಮಕ್ಕಳು ಮೂವರು ಗಂಡು ಮಕ್ಕಳು ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ಶ್ರೀನಿವಾಸ್ 10 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ಅಣ್ಣ ಗೋಪಾಲ್ ತೀರಿಕೊಂಡು 30 ವರ್ಷಗಿಂತ ಹೆಚ್ಚಾಯಿತು. ನನ್ನ ತಮ್ಮ ನರಸಂಹಲು ಆತ ಚಿಕ್ಕವನಿದ್ದಾಗಲೆ ತೀರಿಕೊಂಡಿರುತ್ತಾನೆ. ಮೇಲ್ಕಂಡ ಶ್ರೀನಿವಾಸ್ ಗೋಪಾಲ್ ಮತ್ತು ನರಸಂಹಲು ಗೆ ವಾರಸುದಾರರು ಇದ್ದಾರೆಯೇ ಎಂದರೆ ಸಾಕ್ಷಿಯು ನರಸಂಹಲು ಗೆ ಇಲ್ಲ ಶ್ರೀನಿವಾಸ್ ಮತ್ತು ಗೋಪಾಲ್ ರವರಿಗೆ ಇದ್ದಾರೆ ಎನ್ನುತ್ತಾರೆ. ಚೆಂದ್ರಬಂಡ ರಸ್ತೆಕಡೆ ಇರುವ ಜಮೀನನ್ನು ಶ್ರೀನಿವಾಸ್ ಮತ್ತು ಗೊಪಾಲ್ 9(a) ರಿಂದ 9(f) ಪ್ರತಿವಾದಿಗಳಿಗೆ 1986 ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. 1986 ರಿಂದ ದಾವ ಜಮೀನುಗಳಲ್ಲಿ ಯಾರು ಸ್ವಾಧೀನಾನುಬವದಲ್ಲಿ ಇದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪ್ರತಿವಾದಿ 9(a) ಇಂದ (g) ರವರುಗಳು ದಾವ ಜಮೀನುಗಳಲ್ಲಿ ಸ್ವದೀನಾನುಬವ ಹೊಂದಿದ್ದಾರೆ ಎಂದರೆ ಗೊತ್ತಿಲ್ಲ. 9(a), (b), (c), (d), (f), (g) ಪ್ರತಿವಾದಿಗಳು 9(e) ಮತ್ತು 10 ಪ್ರತಿದಿವಾದಿಗಳಿಗೆ ಪ್ರತೇಕ ಕ್ರೆಯ ಪತ್ರ ಮೂಲಕ ವರ್ಗಾವಣೆ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಅದರಂತೆ ಖಾತೆಗಳು ಬದಲಾಗಿವೆ ಎಂದರೆ ಗೊತ್ತಿಲ್ಲ. ನಂತರದಲ್ಲಿ 9(e) ಮತ್ತು 10 ಪ್ರತಿದಿವಾದಿಗಳು ಚಂದ್ರಬಂಡ ರಸ್ತೆಯ ಪಕ್ಕದ ಜಮೀನುಗಳನ್ನು 2018 ರಲ್ಲಿ ಭೂ ಪರಿವರ್ತನೆ ಮಾಡಿಸಿರುತ್ತಾರೆ ಎಂದರೆ ಗೊತ್ತಿಲ್ಲ.

ನಂತರ ಅವುಗಳಲ್ಲಿ ವಾಸದ ಉದ್ದೇಶಕ್ಕೆ ನಿವೇಶಗಳನ್ನು ನಿರ್ಮಾಣ ಮಾಡಿಸಿರುತ್ತಾರೆ ಮತ್ತು ಈ ಬಗ್ಗೆ ಸಂಬಂದ ಪಟ್ಟ ನಗರ ಅಭಿವೃದಿ ಪ್ರಾಧಿಕಾರದಿಂದ ಅನುಮತಿ ಪಡೆದಿರುತ್ತಾರೆ ಎಂದರೆ ಗೊತ್ತಿಲ್ಲ. ಈ ದಾವೆ ಸಲ್ಲಿಕೆಯ ಮೊದಲೇ ಭೂ ಪರಿವರ್ತನೆ ಮತ್ತು ನಗರಾಭಿವೃದ್ಧಿ ಪ್ರಾಧಿಕಾರದ ಆದೇಶ ಆಗಿತ್ತು ಎಂದರೆ ಗೊತ್ತಿಲ್ಲ. ದಾವೆ ಸಲ್ಲಿಸುವ ಮೊದಲೇ ದಾವ ಜಮೀನುಗಳಲ್ಲಿನ 50 ನಿವೇಶನಗಳು ಮಾರಾಟವಾಗಿದ್ದವು ಎಂದರೆ ಗೊತ್ತಿಲ್ಲ. ದುರುದ್ದೇಶದಿಂದ ಚಂದ್ರಬಂಡ ಕೃಷಿ ಜಮೀನುಗಳು ಎಂದು ತೋರಿಸಿದ್ದೇನೆ ಎಂದರೆ ಗೊತ್ತಿಲ್ಲ. ಚಂದ್ರಬಂಡ ರಸ್ತೆಯ ಜಮೀನುಗಳು ಎನ್ನುವಲ್ಲಿ ಅವು ಸರ್ವೆ 447 ರ ಜಮೀನುಗಳೇ ಎಂದರೆ ಗೊತ್ತಿಲ್ಲ. ಹನುಮವ್ವ ಎಂದರೆ ಯಾರು ಎಂದು ನನಗೆ ಗೊತ್ತಿಲ್ಲ. ಹನುಮವ್ವ ನನ್ನ ಸಂಬಂಧಿಕರಲ್ಲ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ.

(ಈ ಹಂತದಲ್ಲಿ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆ ಮೇರೆಗೆ ಬೆರಳಚ್ಚುಗಾರ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿ ಮತ್ತು ಅವರ ಪರ ವಕೀಲರು ನೋಡಿ ತಿಳಿದುಕೊಂಡಿರುತ್ತಾರೆ.)

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**